ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ.ಎಫ್.ಸಿ ನ್ಯಾಯಾಲಯ
ಬೀದರ್
ಸಿ.ಸಿ.ನಂ 2272-2016

ಪ್ರಾಸಾ-3
ಚಾಸಾ-5
ದಿಃ 18-10-2023

ಹೆಸರು : ಅಂಬಿಕಾ
ಗಂಡನ ಹೆಸರು : ಸಂತೋಷ
ವಯಸು : 27
ಉದ್ಯೋಗ : ಡಬ್ಲ್ಯೂ ಪಿ ಸಿ 1246, ಟೌನ್ ಪಿ ಎಸ್
ವಾಸ ಸ್ಥಳ : ಬೀದರ್.

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತ್ತು
ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಅಭಿಯೋಜಕರವರಿಂದಃ

2017 ರಿಂದ ಜೂನ್ 2022 ರವರೆಗೆ ಎನ್ ಟಿ ಪಿ ಎಸ್ ಠಾಣೆಯಲ್ಲಿ ಡಬ್ಲ್ಯೂ ಪಿ ಸಿ ಅಂತ ಸೇವೆ ಸಲ್ಲಿಸಿರುತ್ತೇನೆ.

ದಿ. 18-02-2022 ರಂದು ಸಾ. 5.00 ಗಂಟೆಗೆ ಚಾಸಾ 1 ರವರು ಕರೆಮಾಡಿ ಸಾಯಿಲಾಡ್ಜ್ ಬೀದರ್‌ನಲ್ಲಿ ವೇಶ್ಯವಾಟಿಕೆ ನಡೆಯುತ್ತಿದ್ದೆ ಅದಕ್ಕೊಸ್ಕರ ದಾಳಿಗೆ ಹೋಗಬೇಕಿದೆ ಬನ್ನಿ ಅಂತ ಕರೆದರು , ಆಗ ನಾನು , ಚಾಸಾ 1, 6 ರಿಂದ 9 ರವರು ಹಾಗೂ ಇಬ್ಬರು ಪಂಚರು ಸೇರಿಕೊಂಡು ಸಾಯಿಲಾಡ್ಜ್‌ಗೆ ರೂಮ್ ನಂ. 306 ಗೆ ಹೊದೇವು ಆ ರೂಮ್‌ನಲ್ಲಿ ಒಬ್ಬ ಹೆಣ್ಣು ಮಗಳು ಸ್ವೀಟಿ ಚಾಸಾ 4 ಮತ್ತು ಒಬ್ಬ ಖಯೂಮ್ ಎನ್ನುವ ವ್ಯಕ್ತಿ ಇಬ್ಬರು ಇದ್ದರು. ಚಾಸಾ 1 ರವರು ಅವರಿಗೆ ವಿಚಾರಣೆ ಮಾಡಿದರು. ವೇಶ್ಯವಾಟಿಕೆ ಮಾಡುವ ಸಲುವಾಗಿ ದಿನಾಲು ರೂ. 500/- ಕೊಡುತ್ತೇವೆ ಅಂತ ಚಾಸಾ 4 ರವರಿಗೆ ಯಾರೋ ಹೇಳಿದ್ದರಂತೆ ಅದಕ್ಕೆ ಬಂದಿದ್ದೇನೆ ಅಂತ ಅವಳು ಹೇಳಿದಳು. ಚಾಸಾ 4 ರವರನನು ನಂತರ ಬೀದರ್‌ನ ಮಹಿಳಾ ಸಂತ್ವಾನ ಕೇಂದ್ರಕ್ಕೆ ಹೋಗಿ ಸೇರಿಸಿದೇವು.

ಸಾಕ್ಷಿ ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲು : 3 , 4 ನೇ ಆರೋಪಿತರ ಪರ ಶ್ರೀ ಜೆ. ಜೆ. ವಕೀಲರಿಂದ :

ನಾವು ಸರಕಾರಿ ಜೀಪ್ ನಂ. ಕೆಎ 38 ಜಿ 0468 ರಲ್ಲಿ ಸಾಯಿ ಲಾಡ್ಜ್‌ಗೆ ಹೋದೆವು. ಚಾಲಕನ ಹೆಸರು ಗೊತ್ತಿರುವುದಿಲ್ಲ. ಚಾಸಾ 1 ರವರು ರೂಮ್ ನಂ. 306 ಕ್ಕೆ ಹೋಗಿ ಬರುವ ವರೆಗೆ ನಾನು ಕೌಂಟರ್‌ನ ರಿಸ್ಪಷನ್‌ನಲ್ಲಿ ಇದ್ದೇ ಅಂದರೆ ಸರಿಯಲ್ಲ. ಹಣ ಜಪ್ತಿ ಮಾಡಿರುವುದಿಲ್ಲ, ಸಾಕ್ಷಿ 6 ಕಾಂಡೊಮ್‌ಗಳನ್ನು ಜಪ್ತಿ ಮಾಡಿದ್ದಾರೆ ಅಂತ ಹೇಳುತ್ತಾರೆ. ಮೇಲೆ ಹೇಳಿದ ಕಾಂಡೊಮ್‌ಗಳನ್ನು ಬಿಟ್ಟು ಬೇರೆ ಏನನ್ನು ಜಪ್ತಿ ಮಾಡಿರುವುದಿಲ್ಲ. ಜಪ್ತಿ ಮಾಡುವ ಸಮಯದಲ್ಲಿ ನಾನು ರೂಮ್ ಒಳಗಡೆ ಇದ್ದೇವು. ನಾನು ಚಾಸಾ 4 ರವರ ಜೊತೆ ಖುದ್ದಾಗಿ ಮಾತನಾಡಿರುತ್ತೇನೆ , ಅವರು ವಿವಸ್ತ್ರವಾಗಿರಲಿಲ್ಲ , ಸರಿಯಿದ್ದರು . ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಿ. 18-02-2022 ರಂದು ಸಾ. 5.00 ಗಂಟೆಗೆ ಚಾಸಾ 1 ರವರು ಕರೆಮಾಡಿ ಸಾಯಿಲಾಡ್ಜ್ ಬೀದರ್‌ನಲ್ಲಿ ವೇಶ್ಯವಾಟಿಕೆ ನಡೆಯುತ್ತಿದ್ದೆ ಅದಕ್ಕೊಸ್ಕರ ದಾಳಿಗೆ ಹೋಗಬೇಕಿದೆ ಬನ್ನಿ ಅಂತ ಕರೆದರು ಅಂತ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆಗ ನಾನು , ಚಾಸಾ 1, 6 ರಿಂದ 9 ರವರು ಹಾಗೂ ಇಬ್ಬರು ಪಂಚರು ಸೇರಿಕೊಂಡು ಸಾಯಿಲಾಡ್ಜ್‌ಗೆ ರೂಮ್ ನಂ. 306 ಗೆ ಹೊದೇವು ಆ ರೂಮ್‌ನಲ್ಲಿ ಒಬ್ಬ ಹೆಣ್ಣು ಮಗಳು ಸ್ವೀಟಿ ಚಾಸಾ 4 ಮತ್ತು ಒಬ್ಬ ಖಯೂಮ್ ಎನ್ನುವ ವ್ಯಕ್ತಿ ಇಬ್ಬರು ಇದ್ದರು. ಚಾಸಾ 1 ರವರು ಅವರಿಗೆ ವಿಚಾರಣೆ ಮಾಡಿದರು ಅಂತ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವೇಶ್ಯವಾಟಿಕೆ ಮಾಡುವ ಸಲುವಾಗಿ ದಿನಾಲು ರೂ. 500/- ಕೊಡುತ್ತೇವೆ ಅಂತ ಚಾಸಾ 4 ರವರಿಗೆ ಯಾರೋ ಹೇಳಿದ್ದರಂತೆ ಅದಕ್ಕೆ ಬಂದಿದ್ದೇನೆ ಅಂತ ಅವಳು ಹೇಳಿದಳು ಅಂತ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ 4 ರವರನನು ನಂತರ ಬೀದರ್‌ನ ಮಹಿಳಾ ಸಂತ್ವಾನ ಕೇಂದ್ರಕ್ಕೆ ಹೋಗಿ ಸೇರಿಸಿದೇವು ಅಂತ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು : 1, 2 ನೇ ಆರೋಪಿತರ ಪರ ಶ್ರೀ ಪಿ. ಕೆ. ವಕೀಲರು ಮೇಲೆ ಹೇಳಿದ ಪಾಟೀಸವಾಲನ್ನು ಅಳವಡಿಸಿಕೊಳ್ಳಲು ವಿನಂತಿಸಿದ್ದರಿಂದ ಅಳವಡಿಸಿಕೊಳ್ಳಲಾಯಿತು.
ಮರುವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಮೇಲೆ ಬೆರಳಚ್ಚು ಮಾಡಲಾಗಿದೆ.)

ಓ.ಹೆ.ಕೆ.ಸರಿ.ಇದೆ,

ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ ಮತ್ತು
ಜೆ.ಎಮ.ಎಫ.ಸಿ ಬೀದರ .